ಯಾವತ್ತೂ ವಾಕ್ಯಗಳನ್ನು ಬಳಸಿ ಮಾತನಾಡಿದ್ದಿಲ್ಲ. ಒಂದೆರಡು ಶಬ್ದಗಳಲ್ಲಿ ಎದುರಿಗಿದ್ದವರಿಗೆ ಏನು ಹೇಳಬೇಕೋ ಅಷ್ಟನ್ನು ಹೇಳಿಬಿಡುತ್ತಿದ್ದ. 'ಒಂದು ರೂಪಾಯಿ', 'ಹೊಟ್ಟೆಗೆ', 'ಕುಡಿಯಲು' ಈ ಮೂರೇ ಶಬ್ದಗಳು ಹೆಚ್ಚು ಬಳಕೆಯಾಗುತ್ತಿದ್ದುದು. ಅದೂ ಒಂದೇ ಬಾರಿ ಮೂರು ಶಬ್ದಗಳು ಬಳಕೆಯಾಗುವುದು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಅವನ ಮನಸ್ಸಿಗೆ ನೋವುಂಟು ಮಾಡಿದರೆ ಅಪರೂಪಕ್ಕೆ 'ಅಹಂಕಾರಿ' ಅನ್ನುತ್ತಿದ್ದ. ಹಾಟ್‌ಮಿಟ್ಲೆ ಹೇಗಿದ್ದೀಯಾ ಅಂದರೆ ನಗುವೇ ಉತ್ತರ. ಒತ್ತಾಯಪೂರ್ವಕವಾಗಿ ಎರಡುಮೂರು ಸಲ ಕೇಳಿದರೆ ಮಾತ್ರ 'ತೊಂದರೆಯಿಲ್ಲ' ಅನ್ನುವನು. ಶಾಲೆಯಲ್ಲಿ ವ್ಯಾಕರಣ ಕಲಿಕೆ ನಡೆಯುತ್ತಿದ್ದಾಗ ಮಕ್ಕಳಿಗಂತೂ ಈ ಭಾಷೆ ಯಾಕಾದರೂ ಇದೆಯೋ? ಹಾಟ್‌ಮಿಟ್ಲೆಯಂತೆ ಕೆಲವೇ ಶಬ್ದಗಳಿದ್ದರೆ ಸಾಕಿತ್ತು ಅಂತನ್ನಿಸುತ್ತಿತ್ತು. ಶಾಲೆಯಲ್ಲಿ ಮೇಸ್ಟ್ರು ಪ್ರಶ್ನೆ ಕೇಳಿದರೆ ಉತ್ತರ ಗೊತ್ತಿಲ್ಲದೆ ವಿದ್ಯಾರ್ಥಿ ಸುಮ್ಮನೆ ನಿಂತರೆ, 'ನೀನೇನು ಹಾಟ್‌ಮಿಟ್ಲೆಯ?' ಎಂದು ಬೈಯುವಷ್ಟು ಹಾಟ್‌ಮಿಟ್ಲೆ ಪ್ರಸಿದ್ಧನಾಗಿದ್ದ.

ಈಗಂತು 'ಹಾಟ್‌ಮಿಟ್ಲೆ' ಮಂಗಳೂರು ಬೆಂಗಳೂರು ಹೆದ್ದಾರಿಯ ಬಿಳಲೂರಿನಿಂದ ಗುಂಡ್ಯವರೆಗಿನ 50 ಕಿಲೋಮೀಟರ್ ವ್ಯಾಪ್ತಿಯ ಹೆದ್ದಾರಿ ಸುತ್ತಮುತ್ತಲಿನವರಿಗೆ ತೀರ ಪರಿಚಿತನಾಗಿದ್ದ. ಆದರೆ ಬಿಳಲೂರಿನಿಂದ ಸ್ವಲ್ಪವೇ ದೂರದಲ್ಲಿರುವ ಉಪ್ಪಿನಂಗಡಿಗೆ ಈತ ಅಪರಿಚಿತ. ಯಾಕೆಂದರೆ ಬಿಳಲೂರಿನಿಂದ ಆತ ಮಂಗಳೂರು ಕಡೆಗೆ ಒಂದು ಬಾರಿಯೂ ಹೋಗಿದ್ದಿಲ್ಲ.

ಹೋಗುವಾಗ ಪ್ರತಿ ಅಂಗಡಿಗಳಲ್ಲಿ ಒಂದು ರೂಪಾಯಿ ತೆಗೆದುಕೊಳ್ಳುತ್ತಿದ್ದರೆ, ಉಪ್ಪೊಳಿಗೆಯ ಸುಕುಮಾರಣ್ಣನ ತಟ್ಟಿ ಹೋಟೆಲ್‌ನ ಎದುರು ಬಂದರೆ ಒಂದು ಗ್ಲಾಸ್ ಚಹ ಕೊಡುತ್ತಾರೆ. ಹೋಟೆಲ್ ಒಳಗಡೆ ಬಾರದ ಆತ ಹೊರಗೆ ನಿಂತು ಕುಡಿದು ಅಲ್ಲೆ ಹೊರಗೆ ಇರುವ ನೀರಲ್ಲಿ ಗ್ಲಾಸ್ ತೊಳೆದು ಲೋಟವನ್ನೂ ಒಂದು ರೂಪಾಯಿಯನ್ನೂ ಇಟ್ಟು ಹೋಗುತ್ತಿದ್ದ. 'ನಿನ್ನ ಒಂದು ರೂಪಾಯಿ ಬೇಡ ಮಾರಾಯ. ಚಹಕ್ಕೆ ಐದು ರೂಪಾಯಿ. ನಿಂಗೆ ಧರ್ಮಕ್ಕೆ ಕೊಟ್ಟಿದ್ದು' ಎಂದು ಆರಂಭದಲ್ಲಿ ಸುಕುಮಾರಣ್ಣ ಹೇಳುತ್ತಿದ್ದರು. ಆ ಮಾತಿಗೂ ತನಗೂ ಸಂಬಂಧವೇ ಇಲ್ಲ ಎಂಬಂತೆ ಒಂದು ರೂಪಾಯಿ ಇಟ್ಟೇ ಹೋಗುತ್ತಿದ್ದ. ಗೋಳಿತೊಟ್ಟಿಗೆ ಹೋದಾಗ ಅಲ್ಲಿರುವ ನಾಲ್ಕೈದು ಅಂಗಡಿಗಳಿಗೆ ಹೋಗಿ ಒಂದೊಂದು ರೂಪಾಯಿ ತೆಗೆದುಕೊಂಡು ಆನಂತರ ಸಾಯಿಬರ ಹೋಟೆಲ್ ಮುಂದೆ ನಿಲ್ಲುತ್ತಿದ್ದ. ಅಲ್ಲಿ ಅವರು ಒಂದು ಇಡ್ಲಿಯೋ, ಪುಂಡಿಯೋ, ದೋಸೆಯೋ ಕೊಟ್ಟರೆ ಅದನ್ನು ತಿಂದು ಒಂದು ರೂಪಾಯಿ ಇಡುತ್ತಿದ್ದ. ಒಂದರ ಬದಲು ಎರಡು ಇಡ್ಲಿಯೋ ಪುಂಡಿಯೋ ದೋಸೆಯೋ ಕೊಟ್ಟರೆ ತೆಗೆದುಕೊಳ್ಳುತ್ತಿರಲಿಲ್ಲ. ಒತ್ತಾಯಪೂರ್ವಕ ಕೊಟ್ಟರೆ ಒಂದು ತಿಂದು ಒಂದನ್ನು ಅಲ್ಲೆಲ್ಲೋ ತಿರುಗಾಡುವ ಬೀದಿನಾಯಿಗೆ ಹಾಕಿ ಹೋಗುತ್ತಿದ್ದ. ಇದನ್ನು ಕಂಡವರು 'ಇವನಿಗೆ ಹುಚ್ಚು ಹಿಡಿದಿದ್ದರೂ ಅಹಂಕಾರ ಇಳಿದಿಲ್ಲ' ಎಂದು ಮೊದಮೊದಲು ಅನ್ನುತ್ತಿದ್ದರು. ಅದು ಅವನ ನಿಯಮ ಎಂಬುದು ಈಗ ಅವರಿಗೆ ಗೊತ್ತಾಗಿದೆ. ಹಾಗಾಗಿ ನಿಯತ್ತಿನ ಬಗ್ಗೆ ಉದಾಹರಣೆ ಕೊಡಲು ಈಗ ಹಾಟ್‌ಮಿಟ್ಲೆಗಿಂತ ಉತ್ತಮವಾಗಿ ಬೇರೆ ಯಾರೂ ಸಿಗುತ್ತಿರಲಿಲ್ಲ.

ಆನಂತರ ಕೋಲ್ಪೆ, ಆರಾಲ್‌ಗಾಗಿ ನೆಲ್ಯಾಡಿ ಕಾಲೇಜು ಬಳಿಯ ಅಂಗಡಿಗಳ ಬಳಿ ಬರುತ್ತಾನೆ. ಅಲ್ಲಿ ಜೋಸೆಫ್ ಚೇಟನ ಹೋಟೆಲ್ ಮುಂದೆ ಒಂದು ತುಂಡು ಕಲ್ತಪ್ಪ ತಿಂದು ಒಂದು ರೂಪಾಯಿ ಇಟ್ಟು ಮುಂದಕ್ಕೆ ಹೋಗಿ ನೆಲ್ಯಾಡಿ ಬಸ್‌ಸ್ಟ್ಯಾಂಡ್ ದಾಟಿದಾಗ ಸಿಗುವ ಸೈಜು ಚೇಟನ ಹೋಟೆಲ್ ಮುಂದೆ ನಿಂತು ಅಲ್ಲೊಂದು ಪರೋಟ ತಿಂದು ಮತ್ತೆ ಎಂದಿನಂತೆ ಒಂದು